Phone: 08282-257424
E-Mail: kuhrmsection@gmail.com

Fax: 08282-256262
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ – 577 451

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

ಸಂಖ್ಯೆ:ಕುವಿ:ಮಾಸನಿ–3&7: 1723. :2022–23 ದಿನಾಂಕ:31–01–2023

ಗೆ,

ಪ್ರಾಂಶುಪಾಲರು
ವಿಶ್ವವಿದ್ಯಾಲಯ ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು
ಶಂಕರಘಟ್ಟ.

ಮಾನ್ಯರೆ,

ವಿಷಯ: ಸ್ನಾತಕ ವಿಭಾಗಗಳಿಗೆ 2022–23ನೇ ಸಾಲಿನ ಶೈಕ್ಷಣಿಕ ಅವಧಿಗೆ ಅತಿಥಿ ಉಪನ್ಯಾಸಕರ ಸೇವೆಗೆ ಅನುಮತಿ ನೀಡುವ ಕುರಿತು.

ಉಲ್ಲೇಖ:
1. ಜಾಹೀರಾತು ಪ್ರಕಟಣೆ ಸಂಖ್ಯೆ:ಕುವಿ:ಮಾಸನಿ–3&7:3701: 2022–23 ದಿನಾಂಕ:01–12–2022
2. ಸಂದರ್ಶನ ದಿನಾಂಕ: 11–01–2023 ರಿಂದ 13–01–2023
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 25–01–2023

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಸ್ನಾತಕ ವಿಭಾಗಗಳಿಗೆ 2022–23ನೇ ಸಾಲಿನ ಶೈಕ್ಷಣಿಕ ಅವಧಿಯಲ್ಲಿ ನಿಯಮಾನುಸಾರ ಖಾಯಂ ಅಧ್ಯಾಪಕರಿಗೆ ಹಂಚಿಕೆ ಮಾಡಿ ಉಳಿಯುವ ಬೋಧನಾ ಕಾರ್ಯಭಾರ ನಿರ್ವಹಣೆಗೆ ಸಂಬಂಧಿಸಿದಂತೆ, ಅತಿಥಿ ಉಪನ್ಯಾಸಕರ ಸೇವೆ ಬಳಸಿಕೊಳ್ಳುವ ಕುರಿತು ಉಲ್ಲೇಖ (01)ರಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿ ಜಾಹೀರಾತು ಪ್ರಕಟಣೆ ನೀಡಲಾಗಿತ್ತು. ಪ್ರಕಟಣೆಗನುಸಾರವಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಉಲ್ಲೇಖ (02)ರ ದಿನಾಂಕಗಳಂದು ಆಯ್ಕೆ ಸಮಿತಿಯಿಂದ ಸಂದರ್ಶನ ನಡೆಸಲಾಗಿದೆ.

ಆಯ್ಕೆ ಸಮಿತಿಯಿಂದ ಆಯ್ಕೆಗೊಂಡ ಈ ಕೆಳಕಂಡ ಅಭ್ಯರ್ಥಿಗಳಿಂದ ಅತಿಥಿ ಉಪನ್ಯಾಸಕ ಸೇವೆಯನ್ನು ದಿನಾಂಕ: 01–02–2023 ರಿಂದ ಅನ್ವಯವಾಗುವಂತೆ 2022–23ನೇ ಸಾಲಿನ ಶೈಕ್ಷಣಿಕ ಸಾಲಿಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಮಾತ್ರ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ. ತಾವು ಸದರಿ ಅಭ್ಯರ್ಥಿಗಳನ್ನು ಸಂಪರ್ಕಿಸಿ ಸೇವೆ ಪಡೆಯುವುದು. ಸದರಿ ಅಭ್ಯರ್ಥಿಗಳು ಅನುಮತಿ ನೀಡಿದ ದಿನಾಂಕದಿಂದ 07 ದಿನಗಳೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಅನುಮತಿಯು ಸ್ವಯಂ ರದ್ದಾಗುತ್ತದೆ.

| ಕ್ರಮ ಸಂಖ್ಯೆ | ವಿಷಯ | ಆಯ್ಕೆಯಾದ ಅಭ್ಯರ್ಥಿಯ ಹೆಸರು ಶ್ರೀ/ಶ್ರೀಮತಿ/ಡಾ. | | ವರ್ಗ |
|---|---|---|---|---|
| 1 | ಕನ್ನಡ | 1. | Nagaraja G | SC |
| | | 2. | Vishala M B | OBC |
| 2 | ಇಂಗ್ಲೀಷ್ | 1. | Lavanya A S | OBC |
| 3 | ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ | 1. | Rashmi S K | OBC |
| 4 | ಅರ್ಥಶಾಸ್ತ್ರ | 1. | Ramya M. | OBC |
| 5 | ಸಮಾಜಶಾಸ್ತ್ರ | 1. | Giridhar S | ST |
| 6 | ದೈಹಿಕ ಶಿಕ್ಷಣ | 1. | Shivakumara B V | OBC |
| 7 | ಬಿ.ಸಿ.ಎ | 1. | Sandeep | OBC |
| | | 2. | Arun Kumar H.D | OBC |
| | | 3. | Sharjeel Ahmed | GM |
| | | 4. | Vikasa V | OBC |
| | | 5. | Pavan L.R | OBC |
| | | 6. | Pavithra V R | GM |
| | | 7. | Chaitra B. | OBC |

| | | | | |
|---|---|---|---|---|
| 8 | ವಾಣಿಜ್ಯಶಾಸ್ತ್ರ | 1. | Vani V | OBC |
| | | 2. | Kirana V K | OBC |
| | | 3. | Tejaswini P | OBC |
| | | 4. | Jyothi G | SC |
| | | 5. | Salma P K | OBC |
| | | 6. | Sukanya M C | OBC |
| | | 7. | Sharath P | OBC |

ನಿಬಂಧನೆಗಳು:

1. ವಿಶ್ವವಿದ್ಯಾಲಯವು ಅನುಮೋದಿಸಿರುವ ಅಭ್ಯರ್ಥಿಗಳ ಸೇವೆಯನ್ನು ದಿನಾಂಕ: 01-02-2023 ರಿಂದ 2022-23ನೇ ಸಾಲಿನ ಶೈಕ್ಷಣಿಕ ಸಾಲಿನ ಅಂತ್ಯದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಮಾತ್ರ ಬಳಸಿಕೊಳ್ಳಲು ಸೂಚಿಸಲಾಗಿದೆ.
2. ಅತಿಥಿ ಉಪನ್ಯಾಸಕರ ಸೇವೆಯು ವಿಭಾಗಗಳಲ್ಲಿನ ಹೆಚ್ಚುವರಿ ಬೋಧನಾ ಕಾರ್ಯ ಹಾಗೂ ಶೈಕ್ಷಣಿಕ / ಸೆಮಿಸ್ಟರ್ ಅವಧಿಗೆ ಮಾತ್ರ ಸೀಮಿತವಾಗಿದ್ದು, ಸದರಿ ಅವಧಿಯ ಮುಕ್ತಾಯ ದಿನಾಂಕದಂದು ಅತಿಥಿ ಉಪನ್ಯಾಸಕರ ಸೇವೆಯು ಸ್ವಯಂ ಯಾವುದೇ ಮುನ್ಸೂಚನೆ ಇಲ್ಲದೆ ರದ್ದಾಗುತ್ತದೆ.
3. ಅತಿಥಿ ಉಪನ್ಯಾಸಕರ ಸೇವೆಯನ್ನು ಯಾವುದೇ ಕಾರಣಕ್ಕೂ ಖಾಯಂ / ಹಂಗಾಮಿ / ತಾತ್ಕಾಲಿಕ / ಅರೆಕಾಲಿಕ ನೇಮಕಾತಿಯೆಂದು ಪರಿಗಣಿಸುವುದಿಲ್ಲ. ಇದು ಶುದ್ಧಾಂಗ ಅತಿಥಿ ಉಪನ್ಯಾಸದ ಸೇವೆಯಾಗಿರುತ್ತದೆ.
4. ಪ್ರಾಂಶುಪಾಲರು ವಿಶ್ವವಿದ್ಯಾಲಯವು ಅನುಮೋದಿಸಿರುವ ಅಭ್ಯರ್ಥಿಗಳಿಂದ ಈ ಕೆಳಗಿನಂತೆ ಮುಚ್ಚಳಿಕೆಯನ್ನು ಬರೆಸಿಕೊಳ್ಳುವುದು.
   "ವಿಶ್ವವಿದ್ಯಾಲಯವು ನನಗೆ ನೀಡಿರುವ ಈ ಅತಿಥಿ ಉಪನ್ಯಾಸಕ ಸೇವೆಯ ಅವಕಾಶವು 2022-23ನೇ ಶೈಕ್ಷಣಿಕ ಸಾಲಿಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಮಾತ್ರ ಸೀಮಿತವಾಗಿರುತ್ತದೆಯೆಂದು, ಯಾವುದೇ ಕಾರಣಕ್ಕೂ ಖಾಯಂ / ಹಂಗಾಮಿ / ತಾತ್ಕಾಲಿಕ / ಅರೆಕಾಲಿಕ ನೇಮಕಾತಿಯೆಂದು ಪರಿಗಣಿಸಲಾಗುವುದಿಲ್ಲವೆಂದು ಹಾಗೂ ತತ್ಕಾಲದ ವ್ಯವಸ್ಥೆಯಾಗಿರುವುದೆಂದು ಮನಗಂಡಿರುತ್ತೇನೆ. ಈ ಸೇವೆಯಿಂದ ನನ್ನನ್ನು ಶೈಕ್ಷಣಿಕ ಸಾಲು ಪೂರ್ಣಗೊಳ್ಳುವ ಮೊದಲೇ ಯಾವುದೇ ಕಾರಣಕ್ಕಾಗಿ, ಯಾವುದೇ ಸಮಯದಲ್ಲಿ, ಯಾವುದೇ ಮುನ್ಸೂಚನೆ ಇಲ್ಲದೇ ವಿಶ್ವವಿದ್ಯಾಲಯವು ರದ್ದುಪಡಿಸಬಹುದೆಂದು ತಿಳಿದಿರುತ್ತೇನೆ ಎಂದು ಮನಪೂರ್ವಕವಾಗಿ ಒಪ್ಪಿ ಈ ಮುಚ್ಚಳಿಕೆಯನ್ನು ಬರೆದುಕೊಡುತ್ತಿದ್ದೇನೆ".
5. **ಮೇಲಿನ ತಃಖ್ತೆಯಲ್ಲಿ ತಿಳಿಸಿರುವ ವಿಷಯವಾರು ಅಭ್ಯರ್ಥಿಗಳಿಗೆ ಪ್ರತಿ ಬೋಧನಾ ಅವಧಿಗೆ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ಸಂಭಾವನೆಯನ್ನು 2022-23ನೇ ಶೈಕ್ಷಣಿಕ ಸಾಲಿನ ಸೆಮಿಸ್ಟರ್ ಅಂತ್ಯದವರೆಗೆ ಮಾತ್ರ ಪಾವತಿಸಲಾಗುತ್ತದೆ. ಸಂಭಾವನೆ ಪಾವತಿಯಲ್ಲಿ ಸೇವಾ ಅನುಭವವನ್ನು ಪರಿಗಣಿಸಲಾಗುವುದಿಲ್ಲ.**
6. ಅತಿಥಿ ಉಪನ್ಯಾಸಕರು, ಬೆಳಗ್ಗೆ 10-00 ರಿಂದ ಸಂಜೆ 5-30ರವರೆಗೆ ವಿಭಾಗದಲ್ಲಿ ಉಪಸ್ಥಿತರಿರುವುದು ಮತ್ತು ವಿಭಾಗದ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳಿಗೂ ಇವರ ಸೇವೆಯನ್ನು ಬಳಸಿಕೊಳ್ಳುವುದು.
7. ಇವರು ಮಾಹೆಯಾನ ನಿರ್ವಹಿಸಿದ ಕಾರ್ಯಭಾರದ ವಿವರವಾದ ತಃಖ್ತೆಯನ್ನು ಲಗತ್ತಿಸಿ, ಉಪ ಕುಲಸಚಿವರು, ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ – ಇವರ ಮೇಲು ಸಹಿಯೊಂದಿಗೆ ಬಿಲ್ಲನ್ನು ಹಣಕಾಸು ವಿಭಾಗಕ್ಕೆ ಸಲ್ಲಿಸುವುದು.
8. **ಅನುಮೋದನೆಗೊಂಡ ಅತಿಥಿ ಉಪನ್ಯಾಸಕರಿಂದ ಬೇರೆ ಯಾವುದೇ ವಿಭಾಗ / ಘಟಕ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲದಿರುವ ಬಗ್ಗೆ ಹಾಗೂ ಪೂರ್ಣಕಾಲಿಕ ಪಿಹೆಚ್.ಡಿ. ಅಭ್ಯರ್ಥಿಗಳಾಗಿ, ಕಾರ್ಯ ನಿರ್ವಹಿಸುತ್ತಿಲ್ಲದಿರುವುದನ್ನು ದೃಢಪಡಿಸಿಕೊಳ್ಳುವುದು. ಬಿಲ್ಲಿನಲ್ಲಿಯೂ ಸಹ ಈ ಕುರಿತು ದೃಢೀಕರಿಸುವುದು.**
9. **ಅತಿಥಿ ಉಪನ್ಯಾಸಕರ ಕಾರ್ಯಭಾರ ಹೊಂದಾಣಿಕೆಯಾಗದೆ ಲೆಕ್ಕ ಪರಿಶೋಧನೆ ಆಕ್ಷೇಪಣೆಯಾದಲ್ಲಿ, ಸಂಬಂಧಿಸಿದ ಕಾಲೇಜು ಹೊಣೆಯಾಗಿರುತ್ತದೆ.**

ತಮ್ಮ ವಿಶ್ವಾಸಿ

ಕುಲಸಚಿವ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ – 577451.
ಶಿವಮೊಗ್ಗ ಜಿಲ್ಲೆ

ಪ್ರತಿಗಳು:

1. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ,ಶಂಕರಘಟ್ಟ.
2. ಉಪಕುಲಸಚಿವರು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ,ಶಂಕರಘಟ್ಟ. (ಪಿಹೆಚ್.ಡಿ. ವಿಷಯ ನಿರ್ವಾಹಕರ ಗಮನಕ್ಕೆ)
3. ಕಛೇರಿ ಪ್ರತಿ.